| ಕರ್ನಾಟಕ ವಿಧಾನ ಪರಿಷತ್ತು | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 714 (570) |
| ಮಾನ್ಯ ಸದಸ್ಯರ ಹೆಸರು | ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 18.08.2025 |
| ಉತ್ತರಿಸಬೇಕಾದ ಸಚಿವರು | ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ನಗರದಲ್ಲಿ ಜಯದೇವ ಹೃದ್ರೋಗ ವಿಜ್ಞಾನ ಹಾಗೂ ಸಂಶೋಧನಾ ಸಂಸ್ಥೆಯು ಎಂದಿನಿಂದ ಕಾರ್ಯನಿರ್ವಹಿಸುತ್ತಿದೆ? ಹಾಗೂ ಇದುವರೆವಿಗೂ ಎಷ್ಟು ರೋಗಿಗಳು ಹೃದಯ ತಪಾಸಣೆಗೆ ಒಳಗಾಗಿದ್ದಾರೆ? (ವಿವರ ನೀಡುವುದು) | ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಕಲಬುರಗಿ ಶಾಖೆಯು ದಿನಾಂಕ: 23-04-2016 ರಿಂದ ಕಾರ್ಯ ನಿರ್ವಹಿಸುತ್ತಿರುತ್ತದೆ. ಇದುವರೆಗೂ 5,47,029 ಹೊರ ರೋಗಿಗಳು ಮತ್ತು 52,427 ಒಳರೋಗಿಗಳು ಹೃದಯ ತಪಾಸಣೆಗೆ ಒಳಗಾಗಿರುತ್ತಾರೆ. |
| ಆ) | ಸದರಿ ಆರೋಗ್ಯ ಸಂಸ್ಥೆಯಲ್ಲಿ ನುರಿತ ವೈದ್ಯರು ಹಾಗೂ ಸಿಬ್ಬಂದಿಗಳ ಕೊರತೆಯಿದ್ದು, ನಿವಾರಣೆಗೆ ಹಾಗೂ ಸಿಬ್ಬಂದಿಗಳ ನೇಮಕಾತಿಯಲ್ಲಿ ಸ್ಥಳೀಯರಿಗೆ ಆದ್ಯತೆ ನೀಡುವ ಬಗ್ಗೆ ಸರ್ಕಾರ ರೂಪಿಸಿರುವ ಮಾನದಂಡಗಳೇನು? (ವಿವರ ನೀಡುವುದು) | ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಕಲಬುರಗಿ ಶಾಖೆಯಲ್ಲಿ ನುರಿತ ವೈದ್ಯರು ಹಾಗೂ ಸಿಬ್ಬಂದಿಗಳ ಕೊರತೆ ಇರುವುದಿಲ್ಲ.<br>ಕಲಬುರಗಿ ಶಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರ ಈ ಕೆಳಕಂಡಂತಿದೆ.<br>1) ಸಹ ಪ್ರಾಧ್ಯಾಪಕರು - 5<br>2) ಸಹಾಯಕ ಪ್ರಾಧ್ಯಾಪಕರು -15<br>3) ತಂತ್ರಜ್ಞರು – 26<br>4) ಶುಶ್ರೂಷಕರು -103<br>5) ಗ್ರೂಪ್-ಡಿ – 40<br>ಈ ಸಂಸ್ಥೆಗೆ ಬೇಕಾದ 60 ಶುಶ್ರೂಷಕರ ಹುದ್ದೆಗಳಲ್ಲಿ ನಿಯಮಾನುಸಾರ ಹೈದರಾಬಾದ್ ಕರ್ನಾಟಕ ಪ್ರದೇಶದ ಅಭ್ಯರ್ಥಿಗಳನ್ನು ಗುತ್ತಿಗೆ ಆಧಾರದಲ್ಲಿ ತುಂಬಿಕೊಳ್ಳಲು ಕ್ರಮವಹಿಸಲಾಗಿದೆ. ಅಲ್ಲದೆ ವಿವಿಧ ವೃಂದದ ಹುದ್ದೆಗಳಿಗೂ ಸಹ ಸ್ಥಳೀಯ ವೃಂದದ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆ. |
| ಇ)_ | ಈ ಆರೋಗ್ಯ ಸಂಸ್ಥೆಯು ಕಲಬುರಗಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಪ್ರಚಾರದ ಕೊರತೆಯಿದ್ದು, ಕಲ್ಯಾಣ ಕರ್ನಾಟಕ ಭಾಗದ ಹಿಂದುಳಿದ ತಾಲ್ಲೂಕುಗಳಲ್ಲಿ ಹೃದಯ ಸಮಸ್ಯೆಯಿಂದ ಬಳಲುತ್ತಿರುವವರಿಗೆ ಹಾಗೂ ಸಾರ್ವಜನಿಕರಿಗೆ ಮಾಹಿತಿ ಕೊರತೆಯನ್ನು ನಿವಾರಿಸಲು ಸ್ಥಳೀಯ ವಾಹಿನಿ, ಸ್ಥಳೀಯ ದಿನಪತ್ರಿಕೆ ಹಾಗೂ ಸಂಘ ಸಂಸ್ಥೆಗಳ ಮೂಲಕ ಪ್ರಚಾರ ಪಡಿಸುವ ಬಗ್ಗೆ ಸರ್ಕಾರ ಕ್ರಮ ಕೈಗೊಂಡಿದಿಯೇ? | ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಕಲಬುರಗಿ ಶಾಖೆಯು ದಿನಾಂಕ: 23-04-2016 ದಿಂದ ಕಾರ್ಯ ನಿರ್ವಹಿಸುತ್ತಿದ್ದು, ದಿನಾಂಕ: 06-01-2025 ರಿಂದ 371 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಉದ್ಘಾಟಿಸಿದ್ದು, ಈ ಸುದ್ದಿಯನ್ನು ಹಲವಾರು ಪತ್ರಿಕೆಗಳಲ್ಲಿ ಪ್ರಕಟಿಸಲಾಗಿದೆ.<br>ಅಲ್ಲದೇ ಈ ಸಂಸ್ಥೆಗೆ ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳಲು ಅಧಿಸೂಚನೆ ಹೊರಡಿಸಿ ಅಭ್ಯರ್ಥಿಗಳನ್ನು ನೇಮಕ ಮಾಡಲಾಗಿದೆ. |

| | | |
|---|---|---|
| | | ಕಲಬುರಗಿ ಶಾಖೆಯ ಹೊಸ ಕಟ್ಟಡ ಉದ್ಘಾಟನೆಗೊಂಡ ನಂತರ ಹೊರ ರೋಗಿಗಳ ಸಂಖ್ಯೆ 250 ರಿಂದ 450 ಕ್ಕೆ ಹೆಚ್ಚಿದ್ದು, ದಿನ ನಿತ್ಯ ಹೊರ ರೋಗಿಗಳ ಸಂಖ್ಯೆ ಹೆಚ್ಚಳ ಆಗುತ್ತಿದೆ. ಕಲಬುರಗಿ ಶಾಖೆಯಲ್ಲಿ ಆರೋಗ್ಯ ಭಾಗ್ಯ, ಜ್ಯೋತಿ ಸಂಜೀವಿನಿ, ಬಿ.ಎಂ.ಟಿ.ಸಿ. / ಕೆ.ಎಸ್.ಆರ್.ಟಿ.ಸಿ. ವತಿಯಿಂದ ಹಾಗೂ ಇನ್ಶೂರೆನ್ಸ್ ಸ್ಕೀಮ್ ಅಡಿ ಬರುವ ಹೃದ್ರೋಗಿಗಳು ಹೆಚ್ಚಿನ ಸಂಖ್ಯೆಯಲ್ಲಿ ತಪಾಸಣೆಗಾಗಿ ಬರುತ್ತಿದ್ದು, ಕಲಬುರಗಿ ಶಾಖೆಯ ಹೊಸ ಕಟ್ಟಡ ಉದ್ಘಾಟನೆಗೊಂಡ ನಂತರ ಶಾಖೆಯಲ್ಲಿ ಎಂ.ಆರ್.ಐ. ಮತ್ತು ಸಿ.ಟಿ. ಸ್ಕ್ಯಾನ್ ವಿಭಾಗಗಳನ್ನು ಪ್ರಾರಂಭಿಸಲಾಗಿದೆ. ಇದುವರೆಗೂ 5,47,029 ಹೊರ ರೋಗಿಗಳು ಮತ್ತು 52,427 ಒಳರೋಗಿಗಳು ಹೃದಯ ತಪಾಸಣೆಗೆ ಒಳಗಾಗಿರುತ್ತಾರೆ. |
| ಈ) | ಈ ಹೃದ್ರೋಗ ಸಂಸ್ಥೆಗೆ "ಜಯದೇವ" ಎಂಬ ಹೆಸರು ಬರಲು ಕಾರಣವೇನು? ಇವರು ಯಾರು? ಈ ಸಂಸ್ಥೆಗೆ ಸದರಿಯವರ ಕೊಡುಗೆ ಏನು? (ಸಂಪೂರ್ಣ ವಿವರ ನೀಡುವುದು) | ದಿವಂಗತ ಅಂಬಲಿ ಚನ್ನಬಸಪ್ಪ ರವರು ಜಯದೇವ ಸಂಸ್ಥೆಯ ಟ್ರಸ್ಟಿ ಆಗಿದ್ದು 1984 ರಲ್ಲಿ ಸಂಸ್ಥೆಗೆ ರೂ. 5,00,000/- ಗಳನ್ನು ದೇಣಿಗೆಯಾಗಿ ನೀಡಿದ್ದು, ಇವರು "ಜಯದೇವ" ಎಂಬ ಹೆಸರು ಸೂಚಿಸಿದ ಕಾರಣ, ಸಂಸ್ಥೆಗೆ ಜಯದೇವ ಹೃದ್ರೋಗ ಸಂಸ್ಥೆಯೆಂದು ನಾಮಕರಣ ಮಾಡಲಾಗಿದೆ. |

ಸಂಖ್ಯೆ:ಎಂಇಡಿ 443 ಎಂಎಸ್ಎಫ್ 2025

**(ಡಾ. ಶರಣಪ್ರಕಾಶ ಆರ್. ಪಾಟೀಲ)**
ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರು